**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಎಸ್.ಸಿ. 125/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ದೊಡ್ಡಪ್ಪ |
| ತಂದೆಯ/ಗಂಡನ ಹೆಸರು | : | ಸಿದ್ದಪ್ಪ |
| ವಯಸ್ಸು | : | 85 ವರ್ಷ |
| ಉದ್ಯೋಗ | : | ಏನೂ ಇಲ್ಲ |
| ವಾಸ ಸ್ಥಳ | : | ಮಾದನಬಾವಿ ಗ್ರಾಮ |

ಪಿ.ಡಬ್ಲ್ಯೂ. 1

ಸಿ.ಡಬ್ಲ್ಯೂ. 1

ದಿ.24.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಚಾಸಾ-6 ನನ್ನ ಹಿರಿಯ ಹೆಂಡತಿಯ ಮಗ. ಚಾಸ-7 ನನ್ನ 2 ನೇ ಹೆಂಡತಿ. ಕರಿಯಮ್ಮ ನನ್ನ ಮೊದಲನೇ ಹೆಂಡತಿ ತೀರಿಕೊಂಡಿರುತ್ತಾರೆ. ಚಾಸಾ-8 ನನ್ನ ಮೊದಲ ಹೆಂಡತಿಯ ಮಗಳು. 1 ನೇ ಆರೋಪಿ ನನ್ನ ತಮ್ಮನಾದ 2 ನೇ ಆರೋಪಿಯ ಮಗ. ಆರೋಪಿ -3 ನನ್ನ ಸೊಸೆ, ಆರೋಪಿ-4 ನನ್ನ ತಂಗಿ. ಕಾಮಾಕ್ಷಿ ನನ್ನ ಸೊಸೆ. ಮಹೇಶ ಕಾಮಾಕ್ಷಿಯ ಗಂಡ. ನಮ್ಮ ಜಮೀನು ಮಾದನಬಾವಿ ಗ್ರಾಮದಲ್ಲಿ ಇದ್ದು, ಅದರ ಸರ್ವೆ ನಂಬರ್ 58 ಆಗಿರುತ್ತದೆ. ಅದು 4 ಎಕರೆ ಇರುತ್ತದೆ. ಆ ಜಮೀನು ನಾನು ಉಳುಮೆ ಮಾಡುತ್ತಿದ್ದೇನೆ. ನನ್ನ ಜಮೀನಿನ ಪಕ್ಕದಲ್ಲಿ 2 ನೇ ಆರೋಪಿಯ ಜಮೀನು ಇದೆ.

ನಾನು ಯಾಕೆ ಕಂಪ್ಲೈಂಟ್ ಕೊಟ್ಟಿದ್ದೇನೆ ಎಂದು ನನಗೆ ಗೊತ್ತು. ಆರೂವರೆ ವರ್ಷದ ಹಿಂದೆ ನಾನು ಮೇವು ಕೊಯ್ಯಲು ಜಮೀನಿನಲ್ಲಿ ಇದ್ದೆ. ಆಗ ಮದ್ಯಾಹ್ನ 3-00 ಗಂಟೆ ಆಗಿತ್ತು. ಬದಿ ಮೇಲೆ ಇದ್ದಂತಹ ಎರಡು ಕಡ್ಡಿಗಳನ್ನುಕೊಯ್ಯುತ್ತಿದ್ದಾಗ ಆಗ ಆರೋಪಿ 1 ರಿಂದ 3 ರವರು ಬಂದು "ಇಲ್ಲಿ ಯಾಕೆ ಕಡ್ಡಿಯನ್ನು ಕೊಯ್ಯುತ್ತಿದ್ದಿಯಾ ಸೂಳೇ ಮಗನೇ, ನಿಮ್ಮ ಅಪ್ಪನ ಆಸ್ತಿನಾ " ಎಂದು ಅವಾಚ್ಯ ಶಬ್ದಗಳಿಂದ ಬೈಯ್ದರು ಮತ್ತು ಹೊಡೆದರು. ಕೊಲೆ ಮಾಡುತ್ತೇನೆ ಅಂತ ಹೇಳಿದರು. ಆದ್ದರಿಂದ ನಾನು ಮನೆಗೆ ಬಂದು ಕುಳಿತುಕೊಂಡಿದ್ದೆ. ಆಗ ನನ್ನ ಮಗ ಚಾಸಾ-6 ರವರು ಶಿಕಾರಿಪುರ ಬೇಕರಿಗೆ ಹೋಗಿದ್ದರು. ಯಾರೋ ವ್ಯಕ್ತಿಯು ಚಾಸಾ-6 ರವರಿಗೆ ಪೋನ್ ಮಾಡಿ ನಿಮ್ಮ ಅಪ್ಪನಿಗೆ ಹೊಡೆದಿದ್ದಾರೆ ಅಂತ ತಿಳಿಸಿದರು. ಚಾಸಾ-6 ರವರು ಮನೆಗೆ ಬಂದಾಗ ರಾತ್ರಿ 9-15 ಗಂಟೆ ಆಗಿತ್ತು. ಘಟನೆ ಬಗ್ಗೆ ನನಗೆ ವಿಚಾರಿಸಿದರು. ನಾನು ಮೇಲೆ ಹೇಳಿದಂತಹ ವಿಷಯವನ್ನು ಅವರಿಗೆ ತಿಳಿಸಿದೆನು. ಆಗ ಚಾಸಾ-6 ರವರು ಆರೋಪಿತರ ಮನೆಗೆ ಹೋಗಿ ನಮ್ಮ ಅಪ್ಪನಿಗೆ ಯಾಕೆ ಹೊಡೆದಿದ್ದೀರಾ ಬೈದಿದ್ದೀರಾ ವಿಚಾರಿಸಲು ಹೋಗಿದ್ದರು. ಆರೋಪಿತರಾದ 1 ರಿಂದ 4 ರವರು, ಕಾಮಾಕ್ಷಿ ರವರು ಗುಂಪು ಕಟ್ಟಿಕೊಂಡು ಬಂದು ನನ್ನ ಮಗನಾದ ಚಾಸಾ-6 ರವರಿಗೆ ಹೊಡೆದರು. ನಾನು ಮತ್ತು ನನ್ನ ಹೆಂಡತಿ ಚಾಸಾ-7 ರವರು ಬಿಡಿಸಲು ಹೋದಾಗ 2 ನೇ ಆರೋಪಿಯು ನನ್ನನ್ನು ತಳ್ಳಿದನು ಇದರಿಂದ ನಾನು ಚರಂಡಿಯಲ್ಲಿ ಬಿದ್ದೆ. ಆಗ ಆರೋಪಿ 3 ರವರು "ಕೊಲೆ ಮಾಡಿಬಿಡಿ" ಅಂತ ಹೇಳಿ ಒಳಗೆ ಹೋಗಿ ಚೂರಿಯನ್ನು ತಂದು 1 ನೇ ಆರೋಪಿ ಕೈಗೆ ಕೊಟ್ಟರು. 1 ನೇ ಆರೋಪಿಯು ನನ್ನ ಮಗನಿಗೆ

ಸಿಕ್ಕಾಪಟ್ಟೆ ಹೊಡೆದರು. ಬಲಗೈಗೆ, ಬೆನ್ನಿಗೆ ಮತ್ತು ಹೊಟ್ಟೆಗೆ ಚೂರಿಯನ್ನು 1 ನೇ ಆರೋಪಿ ನನ್ನ ಮಗ ಚಾಸಾ-6 ನಿಗೆ ಹಾಕಿದ್ದರಿಂದ ನನ್ನ ಮಗ ಚಾಸಾ-6 ಹೊಟ್ಟೆಯಿಂದ ಕರಳು ಹೊರಗೆ ಬಂದಿರುತ್ತದೆ. ಆಬ್ಯುಲೆನ್ಸ್ ನ್ನು ಕರೆಸಿ ಹೊನ್ನಾಳಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆಗ ಅವರು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಲು ಆಗುವುದಿಲ್ಲ ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದರು. ಆದ್ದರಿಂದ ನಾವು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಂಜಪ್ಪ ಆಸ್ಪತ್ರೆಯಲ್ಲಿ ಹೆಚ್ಚು ಕಮ್ಮಿ ಆದರೆ ಅವನು ಉಳಿಯುವುದಿಲ್ಲ ಅಂತ ಹೇಳಿದರು ಆದರಿಂದ ನಾವು ಮಗನಿಗೆ ಮಣಿಪಾಲ್ ಆಸ್ಪತ್ರೆಗೆ ನನ್ನ ಹೆಂಡತಿ ಮತ್ತು ರಂಗಪ್ಪ ರವರು ಕರೆದುಕೊಂಡು ಹೋದರು. ನಾನು ವಾಪಸ್ಸು ಬಂದೆ ಮತ್ತು ಮಾರನೇ ದಿನ ನ್ಯಾಮತಿ ಪೋಲೀಸ್ ಠಾಣೆಗೆ ಬಂದು ಕಂಪ್ಲೇಂಟ್ ಕೊಟ್ಟೆ. ಆಗ ಬೆಳಿಗ್ಗೆ 10-00 ಗಂಟೆ ಆಗಿತ್ತು. ಈಗ ನನಗೆ ತೋರಿಸಿದ ದಾಖಲೆ ನಾನು ನೀಡಿದ ದೂರು ಆಗಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ, ಅದರಲ್ಲಿ ನನ್ನ ಹೆಬ್ಬೆಟ್ಟಿನ ಗುರುತು ಇರುತ್ತದೆ.

2. ಪೋಲೀಸರು ದೂರು ಕೊಟ್ಟ ನಂತರ ಜಮೀನಿಗೆ ಬಂದು ಪರೀಶೀಲಿನೆ ಮಾಡಿ ದಾಖಲೆಯನ್ನು ತಯಾರಿಸಿದರು. ಆ ದಾಖಲೆ ಈಗ ನೋಡುತ್ತಿರುವ ಮಹಜರು ಇದ್ದು ಅದರಲ್ಲಿ ನನ್ನ ಹಬ್ಬೆಟ್ಟಿನ ಗುರುತು ಇರುತ್ತದೆ ಅದನ್ನು ನಿಪಿ-2 ಗುರುತಿಸಲಾಯಿತು. ಅದನ್ನು ಬೆಳಿಗ್ಗೆ ಅರ್ಧ ಗಂಟೆಯಲ್ಲಿ ಮಾಡಿದರು. ಮಹಜರು ಮಾಡುವ ಕಾಲಕ್ಕೆ ಚಾಸಾ-2 ಮತ್ತು 3 ರವರು ಬಂದಿದ್ದರು. ಪೋಲೀಸರು ಬಂದಾಗ ಘಟನೆ ನಡೆದ ಸ್ಥಳವನ್ನು ನಾನೇ ಪೋಲೀಸರಿಗೆ

ತೋರಿಸಿರುತ್ತೇನೆ. ಜಮೀನು ಬಳಿ ಬಂದಂತಹ ಪೋಲೀಸರು ಈಗ ನನಗೆ ತೋರಿಸಿದ ಭಾವಚಿತ್ರ ಆಗಿರುತ್ತದೆ. ಅದನ್ನು ನಿಪಿ- 3 ಮತ್ತು ನಿಪಿ-4 ಎಂದು ಗುರುತಿಸಲಾಯಿತು.

3. ಪೋಲೀಸರು ಹೊಲದಲ್ಲಿ ಮಹಜರ್ ಮಾಡಿದ ನಂತರ 2 ನೇ ಆರೋಪಿಯ ಮನೆಯ ಹತ್ತಿರ ಬಂದರು. ಜಾಗ ಎಲ್ಲಿದೆ ಎಂದು ಕೇಳಿದರು ಆಗ ನಾನು ಆ ಸ್ಥಳವನ್ನು ತೋರಿಸಿಕೊಟ್ಟೆನು. ಅಲ್ಲಿ ಅರ್ಧ ಗಂಟೆಯಲ್ಲಿ ಮಹಜರು ಮಾಡಿದರು. ಅದರಲ್ಲಿ ನನ್ನ ಹೆಬ್ಬೆಟ್ಟಿನ ಗುರುತು ಇರುತ್ತದೆ. ಅದನ್ನು ಈಗ ನಾನು ನೋಡುತ್ತಿದ್ದೇನೆ. ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ನನ್ನ ಜೊತೆ ಚಾಸಾ-2 ಮತ್ತು 3 ರವರು ನಿಪಿ-5 ಕ್ಕೆ ಸಹಿ ಮಾಡಿದ್ದಾರೆ. ಪೋಲೀಸರು ಆ ಸಮಯದಲ್ಲಿ ತೆಗೆದಿದ್ದ ಎರಡು ಬಾವಚಿತ್ರಗಳನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಲೀಸರು ಒಂದು ಶರ್ಟ್ ಮತ್ತು ಟವೆಲ್ ನ್ನು ವಶಪಡಿಸಿಕೊಂಡಿರುತ್ತಾರೆ. ಚಾಸಾ-6 ರವರು ಆ ದಿನ ಧರಿಸಿದಂತಹ ಹಳದಿ ಬಣ್ಣದ ಶರ್ಟ್ ನ್ನು ಈಗ ನೋಡುತ್ತಿದ್ದು ಅದನ್ನು ಎಂ. ಓ -1 ಎಂದು ಗುರುತಿಸಲಾಯಿತು. ಬಣ್ಣದ ಒಂದು ಟವೆಲ್‌ನ್ನು ನೋಡುತ್ತಿದ್ದು, ಅದನ್ನು ಎಂ ಓ -2 ಎಂದು ಗುರುತಿಸಲಾಯಿತು. (ಸದರಿ ಮುದ್ದೆಮಾಲುಗಳನ್ನು ಸೀಲು ಆಗಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ಓಪನ್ ಮಾಡಲಾಗಿದೆ ನಂತರ ಗುರುತು ನೀಡಲಾಗಿದೆ.)

4. ನನ್ನ ಮಗನಿಗೆ ಚುಚ್ಚಿದ ಚೂರಿ 10 ಇಂಚು ಉದ್ದ ಇದು, ಬಿದರಿನ ಹಿಡಿ ಇತ್ತು. ಅದನ್ನು ನೋಡಿದರೆ ನಾನು ಗುರುತಿಸುತ್ತೇನೆ (ಸದರಿ ಮುದ್ದೆಮಾಲುನ್ನು ಸೀಲು ಆಗಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ಓಪನ್ ಮಾಡಲಾಗಿದೆ ನಂತರ

ಗುರುತು ನೀಡಲಾಗಿದೆ.) ಸದರಿ ಚೂರಿಯನ್ನು ನಾನು ನೋಡುತ್ತಿದ್ದು ಎಂ.ಓ -3 ಎಂದು ಗುರುತಿಸಲಾಗಿದೆ.

5. ಜಮೀನಿನ ಗಲಾಟೆ ಕುರಿತು ಆರೋಪಿತರು ನನಗೆ ಮತ್ತು ನನ್ನ ಮಗನಿಗೆ ಈ ರೀತಿ ಹೊಡೆದು ಗಲಾಟೆ ಮಾಡಿರುತ್ತಾರೆ. ನನ್ನ ಮಗನಿಗೆ ಕೊಲೆ ಮಾಡಲು 1 ನೇ ಆರೋಪಿಯು ಚೂರಿಯನ್ನು ಉಪಯೋಗಿಸಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ನೋಡಿ ಗುರಿತಿಸುತ್ತೇನೆ 2 ನೇ ಆರೋಪಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. (2 ನೇ ಆರೋಪಿಯು ಗೈರು ಹಾಜರು ಇದ್ದು ಆರೋಪಿ ಪರ ವಕೀಲರು ಅವರನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ)

(ಈ ಹಂತದಲ್ಲಿ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.